ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

47ನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸಭೆ ಹಾಗೂ 2024ನೇ ಸಾಲಿನ 2ನೇ ಸಭೆಯ ನಡಾವಳಿಗಳು

ದಿನಾಂಕ : ಶುಕ್ರವಾರ, 14 ಜೂನ 2024
ಸಮಯ : ಪೂರ್ವಾಹ್ನ 11 : 00 ಘಂಟೆ
ಸ್ಥಳ : ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ತಿನ 47ನೇ ಸಾಮಾನ್ಯ ಸಭೆಯ ಹಾಗೂ 2024ನೇ ಸಾಲಿನ 2ನೇ ಸಭೆಯು ದಿನಾಂಕ 14 ಜೂನ್ 2024 ರಂದು ಪೂರ್ವಾಹ್ನ 11.00 ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

I. ಹಾಜರಿದ್ದ ಸದಸ್ಯರು

1. ಪ್ರೊ. ಸಿ. ಎಂ. ತ್ಯಾಗರಾಜ	ಕುಲಪತಿಗಳು ಹಾಗೂ ಅಧ್ಯಕ್ಷರು
2. ಶ್ರೀ ಆಯ್. ಎಸ್. ಪವಾರ	ಸದಸ್ಯರು
3. ಡಾ. ಬಸನಗೌಡ ಬಿ. ಪೋಲಿಸ್‌ಪಾಟೀಲ್	ಸದಸ್ಯರು
4. ಪ್ರೊ. ಬಿ. ಎಂ. ಕೋಲಾರ	ಸದಸ್ಯರು
5. ಪ್ರೊ. ಸಿದ್ಧಗೌಡ ಪಾಟೀಲ್	ಸದಸ್ಯರು
6. ಡಾ. ಎಸ್. ಎ. ಪತಂಗಿ	ಸದಸ್ಯರು
7. ಪ್ರೊ. ಯು. ಎಂ. ಶಿವನಗೌಡರ್	ಸದಸ್ಯರು
8. ಡಾ. ವಿ. ಪಿ. ಕುರಿ	ಸದಸ್ಯರು
9. ಶ್ರೀ ಜಿ. ಎಚ್. ಮನ್ನೂರ	ಸದಸ್ಯರು
10. ಡಾ.(ಶ್ರೀಮತಿ) ನಿರ್ಮಲಾ ಜಿ. ಭಟ್ಟಲ	ಸದಸ್ಯರು
11. ಪ್ರೊ. ಡಿ. ಎನ್. ಪಾಟೀಲ್	ಸದಸ್ಯರು
12. ಪ್ರೊ. ಚಂದ್ರಿಕಾ.ಕೆ.ಬಿ	ಸದಸ್ಯರು
13. ಪ್ರೊ. ಕಮಲಾಕ್ಷಿ ತಡಸದ	ಸದಸ್ಯರು
14. ಪ್ರೊ. ಬಾಲಚಂದ್ರ ಹೆಗಡೆ	ಸದಸ್ಯರು
15. ಪ್ರೊ. ಕಾಂತರಾಜು ಕಾಮಣ್ಣ	ಸದಸ್ಯರು
16. ಪ್ರೊ. ವ್ಹಿ. ಎಫ್. ನಾಗಣ್ಣವರ	ಸದಸ್ಯರು
17. ಪ್ರೊ. ಬಸವರಾಜ ಪದ್ಮಶಾಲಿ	ಸದಸ್ಯರು
18. ಪ್ರೊ. ಎಂ. ಸಿ. ಎರ್ರಿಸ್ವಾಮಿ	ಸದಸ್ಯರು
19. ಪ್ರೊ. ಎಸ್. ಬಿ. ಆಕಾಶ	ಸದಸ್ಯರು
20.ಪ್ರೊ. ವ್ಹಿ. ಎಂ. ಬಂಕಾಪೂರ, (ಗ್ರಂಥಪಾಲಕರು)	ಸದಸ್ಯರು
21. ಪ್ರೊ. ಅಶೋಕ ಡಿ' ಸೋಜಾ (ಯೋ.ಮೇ.ಮೌ ಮಂಡಳಿ)	ಸದಸ್ಯರು
22.ಪ್ರೊ. ಎಸ್.ಎಂ. ಗಂಗಾಧರಯ್ಯ, (ನಿರ್ದೇಶಕರು, ಸಿ.ಡಿ.ಸಿ.)	ಸದಸ್ಯರು
23.ಪ್ರೊ. ಎಸ್. ಬಿ. ಆಕಾಶ (ಹಣಕಾಸು ಅಧಿಕಾರಿಗಳು)	ಸದಸ್ಯರು
24. ಶ್ರೀ ರವೀಂದ್ರನಾಥ ಕದಮ್, (ಕುಲಸಚಿವರು(ಮೌಲ್ಯಮಾಪನ)	ಸದಸ್ಯರು
25.ರಾಜಶ್ರೀ ಜೈನಾಪೂರ ಕೆ.ಎ.ಎಸ್.	ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

II. ಹಾಜರಾಗದ ಸದಸ್ಯರು

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ	ಸದಸ್ಯರು
3. ಶ್ರೀ ಗಣೇಶ ಪ್ರ ಹುಕ್ಕೇರಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
4. ಶ್ರೀ ಬಿ. ಬಿ. ಚಿಮ್ಮನಕಟ್ಟಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
5. ಶ್ರೀ ಅಶೋಕ ಮ ಮನಗೂಳಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
6. ಶ್ರೀ. ಪ್ರದೀಪ ಶೆಟ್ಟರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು	ಸದಸ್ಯರು
7. ಡಾ. ಸಾಬಣ್ಣ ತಳವಾರ, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು	ಸದಸ್ಯರು
8. ಡಾ. ವಿರಾಜ ಮೋದಿ	ಸದಸ್ಯರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156

ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ **14 ಜೂನ 2024** ರಂದು ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿಯಲ್ಲಿ ಜರುಗಿದ ವಿಶ್ವವಿದ್ಯಾಲಯದ **47ನೇ ಹಾಗೂ 2024ನೇ** ಸಾಲಿನ **2ನೇ** ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31.
2. ಮಾನ್ಯ ಕುಲಪತಿಗಳ ಸಭೆ ನಡೆಸಲು ನೀಡಿದ ಅನುಮೋದನೆ ದಿನಾಂಕ:22.05.2024.
3. ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ:26.05.2024.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 47ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯನ್ನು ದಿನಾಂಕ: 14.06.2024 ರಂದು ಆಯೋಜನೆ ಮಾಡಲಾಗಿತ್ತು. ಸಭೆಯ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಲಾಯಿತು.

ತದನಂತರ, ವಿಷಯ ಸೂಚಿಗಳನ್ನು ಪ್ರಸ್ತಾಪಿಸಲಾಯಿತು.

ಕ್ರ.ಸಂ.	ಸಂಖ್ಯೆ	ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು
1	2024/06/01	ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು.
ತೀರ್ಮಾನ		ದಿನಾಂಕ: 12.03.2024 ರಂದು ನಡೆದ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿ ಅನುಮೋದನೆ ನೀಡಿತು.
2	2024/06/02	2023–24 ನೇ ಶೈಕ್ಷಣಿಕ ಸಾಲಿನಲ್ಲಿ ಡಿಪ್ಲೋಮಾ ಇನ್ ವಚನ ಸ್ಟಡೀಸ್ ಹಾಗೂ ಡಿಪ್ಲೋಮಾ ಇನ್ ಭಾಷಾಂತರ ಅಧ್ಯಯನ ಹಾಗೂ ಡಿಪ್ಲೋಮಾ ಇನ್ ಅಂಬೇಡ್ಕರ ಸ್ಟಡೀಸ್ ಪ್ರವೇಶಾತಿ ಶುಲ್ಕದ ಕುರಿತು.
ತೀರ್ಮಾನ		2023–24 ನೇ ಶೈಕ್ಷಣಿಕ ಸಾಲಿನಲ್ಲಿ ಶಾಸ್ತ್ರೀಯ ಕನ್ನಡ ಅಧ್ಯಯನ ವಿಭಾಗದಿಂದ ನಡೆಸಲಾಗುವ ಡಿಪ್ಲೋಮಾ ಇನ್ ವಚನ ಸ್ಟಡೀಸ್ ಹಾಗೂ ಡಿಪ್ಲೋಮಾ ಇನ್ ಭಾಷಾಂತರ ಅಧ್ಯಯನ ಹಾಗೂ ಡಿಪ್ಲೋಮಾ ಇನ್ ಅಂಬೇಡ್ಕರ ಸ್ಟಡೀಸ್ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ನೊಂದಣಿ ಶುಲ್ಕವನ್ನು ರೂ. 1500/–ಗಳನ್ನು ಮಾತ್ರ ಭರಿಸಿಕೊಂಡು ಪ್ರವೇಶಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವ ವಿಷಯಕ್ಕೆ ಸಭೆಯು ಅನುಸನುಮರ್ಥನೆ ನೀಡಿತು.
3	2024/06/03	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಕೋರ್ಸ್‌ನ 6ನೇ ಸೆಮಿಸ್ಟರನಲ್ಲಿ NEP ಪಠ್ಯಕ್ರಮದಲ್ಲಿ INTERNSHIP/PROJECT ವಿಷಯದ ಕುರಿತು.
ತೀರ್ಮಾನ		2024–25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸ್‌ಗಳ 6ನೇ ಸೆಮಿಸ್ಟರನ NEP ಪಠ್ಯಕ್ರಮದಲ್ಲಿ INTERNSHIP/PROJECT ನ್ನು ಯುಜಿಸಿ ಮಾರ್ಗಸೂಚಿಯಂತೆ ತಯಾರಿಸಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಅಳವಡಿಸಲು ಪ್ರೊ. ವಿಜಯ ನಾಗಣ್ಣವರ ಇವರ ಅಧ್ಯಕ್ಷತೆಯ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಮಿತಿಯ ವರದಿಯನ್ನು ಪರಿಶೀಲಿಸಿ ರಾಚವಿ ಯ ಸ್ನಾತಕ ಕೋರ್ಸ್‌ಗಳ 6ನೇ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿ ಅಳವಡಿಸಲು ಸಭೆಯು ಅನುಮೋದನೆ ನೀಡಿತು.

<table>
<tr><td>4</td><td>2024/03/04</td><td>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ Geo-Informatics, ಬಿ.ಎ., ಬಿ.ಎಸ್ಸಿ, ಐಚ್ಛಿಕವಾಗಿ ಬಿ.ಎಸ್ಸಿ.ಗೆ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಬಿ.ಸಿ.ಎ. ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಯ ಮಿತಿಯನ್ನು ಹೆಚ್ಚಳ ಮಾಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಬಿ.ಎಸ್ಸಿ. ಕೋರ್ಸ್‌ಗಳಲ್ಲಿ Geo-Informatics, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಬಿ.ಎ. ಕೋರ್ಸ್‌ನಲ್ಲಿ ಶಿಕ್ಷಣಶಾಸ್ತ್ರ ವಿಷಯಗಳಿಗೆ ಮಾತ್ರ 40 ಪ್ರವೇಶ ಮಿತಿ ಸೀಮಿತಗೊಳಿಸಿ ಸದರಿ ವಿಷಯಗಳನ್ನು ಐಚ್ಛಿಕವಾಗಿ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.

ಮುಂದುವರೆದು, ಬಿ.ಸಿ.ಎ. ಕೋರ್ಸ್‌ನ ಪ್ರವೇಶ ಮಿತಿಯು 60 ಕ್ಕೆ ಇದ್ದು 40 ಪ್ರವೇಶ ಮಿತಿಯನ್ನು ಹೆಚ್ಚಿಸಿ ಹಾಗೂ ಇಂಗ್ಲೀಷ ವಿಷಯವನ್ನು ಪುನರ್ ಆರಂಭಿಸುವ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.</td></tr>
<tr><td>5</td><td>2024/06/05</td><td>2024–25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ವಿವಿಧ ಕೊರ್ಸ್‌ಗಳಿಗೆ ಏಕರೂಪ ವಿದ್ಯಾರ್ಥಿ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>2024–25ನೇ ಶೈಕ್ಷಣಿಕ ಸಾಲಿನಲ್ಲಿ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ವಿವಿಧ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಗೆ ಸಂಬಂಧಿಸಿದ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ಏಕರೂಪ ವಿದ್ಯಾರ್ಥಿ ಶುಲ್ಕ ನಿಗದಿಪಡಿಸಲು ಸಮಿತಿ ರಚಿಸಿದ್ದು, ಸದರಿ ಸಮಿತಿಯು ಸಲ್ಲಿಸಿದ ನಡಾವಳಿಗಳನ್ನು ಸಭೆಗೆ ಮಂಡಿಸಲಾಯಿತು. ಆದರೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರ ನಿರ್ದೇಶದಂತೆ ಏಕರೂಪ ವಿದ್ಯಾರ್ಥಿ ಶುಲ್ಕಗಳನ್ನು ಜಾರಿಗೊಳಿಸಿರುವುದಿಲ್ಲ. ಕಾರಣ, ಪ್ರಸ್ತುತ 2023–24 ನೇ ಸಾಲಿನ ಪ್ರವೇಶ ಶುಲ್ಕಕ್ಕೆ ಶೇ.20 ರಷ್ಟು ಹೆಚ್ಚಿಸಿ ವಿದ್ಯಾರ್ಥಿ ಪ್ರವೇಶ ಶುಲ್ಕಗಳನ್ನು ನಿಗದಿಪಡಿಸಲು ಸಭೆಯು ಅನುಮೋದನೆ ನೀಡಿತು.</td></tr>
<tr><td>6</td><td>2024/06/06</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಭ್ಯಾಸ ಮಂಡಳಿ ಅಧ್ಯಕ್ಷರುಗಳಿಗೆ ಹಾಗೂ ಸದಸ್ಯರುಗಳಿಗೆ ಪ್ರಯಾಣ ಭತ್ಯೆ/ದಿನಭತ್ಯೆಯನ್ನು ಪರಿಷ್ಕರಣೆ ಮಾಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>2024–25 ನೇ ಶೈಕ್ಷಣಿಕ ಸಾಲಿನ ಪಠ್ಯಕ್ರಮವನ್ನು ರಚಿಸುವ ಸ್ನಾತಕ/ಸ್ನಾತಕೋತ್ತರ ಅಭ್ಯಾಸ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಪ್ರಯಾಣ ಭತ್ಯೆ/ದಿನಭತ್ಯೆಯನ್ನು ನೀಡಬೇಕಾಗಿರುತ್ತದೆ. ಕರ್ನಾಟಕ ಸರ್ಕಾರದಿಂದ ಹೊರಡಿಸಲಾದ ಏಕರೂಪ ಪರೀಕ್ಷಾ ಮಂಡಳಿಯ ಶುಲ್ಕದನ್ವಯ ಈ ಕೆಳಕಂಡಂತೆ ಪ್ರಯಾಣಭತ್ಯೆ ಹಾಗೂ ದಿನಭತ್ಯೆಯನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಜಾರಿಗೊಳಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.
<table>
<tr><th>ಸಂ</th><th>ವಿವರಣೆ</th><th>ಈಗಿರುವ ಭತ್ಯೆ</th><th>ಪರಿಷ್ಕರಣೆ ಮಾಡಬೇಕಾಗಿರುವ ಭತ್ಯೆ</th></tr>
<tr><td>1</td><td>ಬಾಹ್ಯ ಬಿ.ಓ.ಎಸ್. ಹಾಗೂ ಬಿ.ಓ.ಇ. ಅಧ್ಯಕ್ಷರು ಹಾಗೂ ಸದಸ್ಯರುಗಳು</td><td>ಪ್ರಯಾಣ ಭತ್ಯೆ ರೂ.2/–
ದಿನಭತ್ಯೆ ರೂ.500/–</td><td>ಪ್ರಯಾಣ ಭತ್ಯೆ ರೂ.5/–
ದಿನಭತ್ಯೆ ರೂ.700/–</td></tr>
<tr><td>2</td><td>ಡಾಕ್ಟರಲ್ ಕಮಿಟಿ ಅಧ್ಯಕ್ಷರು ಹಾಗೂ ಸದಸ್ಯರುಗಳು</td><td>ಪ್ರಯಾಣ ಭತ್ಯೆ ರೂ.2/–
ದಿನಭತ್ಯೆ ರೂ.500/–</td><td>ಪ್ರಯಾಣ ಭತ್ಯೆ ರೂ.5/–
ದಿನಭತ್ಯೆ ರೂ.700/–</td></tr>
</table></td></tr>
<tr><td>7</td><td>2024/06/07</td><td>ರಾಜ್ಯ ಶಿಕ್ಷಣ ನೀತಿ ಆಯೋಗದ ನಿರ್ದೇಶನದಂತೆ 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕ ಪಠ್ಯಕ್ರಮ ಹಾಗೂ ಕೋರ್ಸ್ ಕ್ರೆಡಿಟ್‌ಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಅನುಮತಿ ನೀಡುವ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024–25 ನೇ ಶೈಕ್ಷಣಿಕ ಸಾಲಿನಿಂದ ರಾಜ್ಯ ಶಿಕ್ಷಣ ನೀತಿ ಆಯೋಗದ ನಿರ್ದೇಶನಕ್ಕೆ ಪಠ್ಯಕ್ರಮ ಹಾಗೂ ಕೋರ್ಸ್ ಕ್ರೆಡಿಟ್‌ಗಳನ್ನು ಅಳವಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.</td></tr>
<tr><td>8</td><td>2024/06/08</td><td>ಸರಕಾರದ ನಿರ್ದೇಶನದಂತೆ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿಗೆ ಅನುಮತಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ವಿವಿಧ ಕೋರ್ಸ್‌ಗಳಿಗೆ ಏಕರೂಪ ಶುಲ್ಕ ಮತ್ತು ವೇಳಾಪಟ್ಟಿಯಂತೆ ಪರಿಷ್ಕರಣೆ ಮಾಡುವ ಕುರಿತು.</td></tr>
</table>

ತೀರ್ಮಾನ		ಸರಕಾರದ ನಿರ್ದೇಶದಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸಗಳಿಗೆ ಏಕರೂಪ ಶುಲ್ಕಗಳನ್ನು ನಿಗದಿಪಡಿಸಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ಶಿಫಾರಸ್ಸನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. ಮಾನ್ಯ ಕುಲಪತಿಗಳು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರ ಸದರಿ ಆದೇಶವನ್ನು ಹಿಂಪಡೆಯಲು ಸೂಚಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. "ರಾಜ್ಯದ ವಿಶ್ವವಿದ್ಯಾಲಯಗಳ ಏಕರೂಪ ಶುಲ್ಕದ" ಕುರಿತು ರಾಜ್ಯ ಸರ್ಕಾರ ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದಂತೆ ಮುಂದಿನ ನಿರ್ದೇಶನ ಕೋರಿದರು. ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರ ಆದೇಶದಂತೆ ಏಕರೂಪ ಶುಲ್ಕದ ಕೈಪಿಡಿಯನ್ನು ಹಿಂಪಡೆಯಲು ಸಭೆಯು ಸೂಚಿಸಿತು. ಪ್ರಸಕ್ತ 2024-25ನೇ ಸಾಲಿನ ಪ್ರವೇಶಾತಿ ಶುಲ್ಕವನ್ನು ಹಿಂದಿನ ಶೈಕ್ಷಣಿಕ ವರ್ಷಕ್ಕಿಂತ ಶೇ.20 ರಷ್ಟು ಹೆಚ್ಚಿಸಲು ಹಾಗೂ ಮುಂಬರುವ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕವನ್ನು ಹಿಂದಿನ ವರ್ಷದ ಪರೀಕ್ಷಾ ಶುಲ್ಕಕ್ಕೆ ಶೇ. 20 ರಷ್ಟು ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು.
9	2024/06/09	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ External AAA(Academic and Administrative Audit) ನಡೆಸಲು ರಚಿಸಲು ಅನುಮತಿ ಕೋರುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಉನ್ನತ ದರ್ಜೆಯ ನ್ಯಾಕ್ ಮಾನ್ಯತೆ ಪಡೆಯಲು External AAA(Academic and Administrative Audit) ರಚಿಸಲು ಸಭೆಯು ಅನುಮೋದನೆ ನೀಡಿತು.
10	2024/06/10	ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು Bajaj Finance ಇವರೊಂದಿಗೆ ಒಡಂಬಡಿಕೆ(MoU) ಮಾಡಿಕೊಳ್ಳುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಬ್ಯಾಂಕಿಂಕ್, ಫೈನಾನ್ಸ್ ಹಾಗೂ ವಿಮೆಗಳಿಗೆ ಕುರಿತಂತೆ ಹೆಚ್ಚಿನ ಜ್ಞಾನ ನೀಡಲು ಉಚಿತವಾಗಿ ಸರ್ಟಿಫೀಕೇಟ್ ಕೋರ್ಸ್‌ಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು Bajaj Finance ಇವರೊಂದಿಗೆ ಒಡಂಬಡಿಕೆ(MoU) ಮಾಡಿಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯು ಚರ್ಚಿಸಿದ ನಂತರ ಅನುಮೋದನೆ ನೀಡಿತು.
11	2024/06/11	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ Digital Academic Platform ಸ್ಥಾಪಿಸುವ ಬಗ್ಗೆ
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ Digital Academic Platform ನ್ನು ಸ್ಥಾಪಿಸಲು ಅನುಮೋದನೆ ನೀಡಿತು.
12	2024/06/12	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ Technical Skills, Soft Skills, Industry Specific Skills, Entrepreneurship and Business Skill, Digital Literacy Career Development and Professional Development ವೃದ್ಧಿಪಡಿಸಲು NSDC ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.
13	2024/06/13	ಆಂತರಿಕ ಸಂಪನ್ಮೂಲ ಕ್ರೋಡಿಕರಣಕ್ಕೆ Digital Library ಅನ್ನು ರಾಷ್ಟ್ರೀಯ/ರಾಜ್ಯದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ಹಾಗೂ Smart City Belagavi ಇವರ ಸಹಯೋಗದೊಂದಿಗೆ ಪ್ರಾರಂಭಿಸಲು ಅವಶ್ಯಕ ಸೇವೆ ಒದಗಿಸುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಗಾಗಿ ಆಂತರಿಕ ಸಂಪನ್ಮೂಲ ಕ್ರೋಢೀಕರಣಕ್ಕೆ **Digital Library** ಅನ್ನು ರಾಷ್ಟ್ರೀಯ/ರಾಜ್ಯದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ಹಾಗೂ **Smart City Belagavi** ಇವರ ಸಹಯೋಗದೊಂದಿಗೆ ಪ್ರಾರಂಭಿಸುವ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.
14	2024/06/14	2024-25 ನೇ ಸಾಲಿನಿಂದ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದಲ್ಲಿ Integrated ಎಂ.ಬಿ.ಎ ಹಾಗೂ ಎಂ.ಸಿ.ಎ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದಲ್ಲಿ **2024-25** ನೇ ಶೈಕ್ಷಣಿಕ ಸಾಲಿನಿಂದ **Integrated** ಎಂ.ಬಿ.ಎ ಹಾಗೂ ಎಂ.ಸಿ.ಎ ಕೋರ್ಸ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.

15	2024/06/15	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವಿದೇಶದಲ್ಲಿ Post Doct Fellowship ಮತ್ತು Research Paper Presentation ಮಾಡಲು ಸಭೆಯ ಅನುಮತಿ ನೀಡುವ ಕುರಿತು.
ತೀರ್ಮಾನ		ಪ್ರೊ. ನಾಗರತ್ನಾ ಪರಾಂಡೆ, ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರಿಗೆ ದಿನಾಂಕ: 29.06.2024 ರಿಂದ 01.10.2024 ರ ವರೆಗೆ ಪ್ರಯಾಣ ದಿನಗಳ ಒಳಗೊಂಡ ಒಟ್ಟು 94 ದಿನಗಳ ವರೆಗೆ International Institute of Asia Studies, Leiden University Asian Studies, Leiden University, Netherland ಇಲ್ಲಿ Doct Fellowship ಗೆ ಹಾಗೂ ಡಾ. ಪೂಜಾ ಪಿ. ಹಲ್ಯಾಳ, ಸಹ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರಿಗೆ ದಿನಾಂಕ: 03.07.2024 ರಿಂದ 16.07.2024 ರ ವರೆಗೆ ಪ್ರಯಾಣ ದಿನಗಳನ್ನು ಒಳಗೊಂಡು ಒಟ್ಟು 14 ದಿನಗಳ ವರೆಗೆ 51st Annual International Conference of the Joseph Conrad Society(UK) London ಇಲ್ಲಿ Research Paper Presentation ನೀಡುವುದಕ್ಕೆ ಹಾಜರಾಗಲು ಸಭೆಯು ಅನುಮತಿ ನೀಡಿತು ಹಾಗೂ ಸದರಿ ಸಿಬ್ಬಂದಿಗಳ ಗೈರು ಹಾಜರಿಯನ್ನು ಕಛೇರಿ ಕೆಲಸವೆಂದು(ಓಡಿ) ಪರಿಗಣಿಸಲು ಸಭೆಯು ತೀರ್ಮಾನಿಸಿತು.
16	2024/06/16	ಪ್ರೊ. ಬಿ. ಜಿ. ಹೆಗಡೆ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಇವರಿಗೆ University of Southern California, Los Angeles, USA ಇಲ್ಲಿ ಭೇಟಿ ನೀಡಲು ಅನುಮತಿ ನೀಡಿದ್ದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಮಂಡಿಸಿರುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಬಿ. ಜಿ. ಹೆಗಡೆ ಇವರಿಗೆ ದಿನಾಂಕ: 09-05-2024 ರಿಂದ 13-06-2024 ರ ವರೆಗೆ ಪ್ರಯಾಣ ದಿನಗಳನ್ನು ಒಳಗೊಂಡು ಒಟ್ಟು 36 ದಿನಗಳವರೆಗೆ Charge Ordering phenomena in certain manganites ಬಗ್ಗೆ ಜ್ಞಾನ ಪಡೆಯಲು University Southern California, Los Angeles, USA ಇಲ್ಲಿ ಭೇಟಿ ನೀಡಲು ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.
17	2024/06/17	2024-25 ನೇ ಸಾಲಿಗೆ ವಿವಿಧ ಮಹಾವಿದ್ಯಾಲಯಗಳಿಗೆ ಸ್ಥಳೀಯ ತನಿಖಾ ಸಮಿತಿಯವರು ಭೇಟಿ ನೀಡಿ ಸಲ್ಲಿಸಿರುವ ವರದಿಗಳಿಗೆ ಅನುಮೋದನೆ ನೀಡುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25 ನೇ ಸಾಲಿಗೆ ವಿವಿಧ ಮಹಾವಿದ್ಯಾಲಯಗಳಿಗೆ "ಸ್ಥಳೀಯ ತನಿಖಾ ಸಮಿತಿ"ಯವರು ಭೇಟಿ ನೀಡಿ ಸಲ್ಲಿಸಿದ ವರದಿಗಳನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
18	2024/06/18	2021-22 ನೇ ಸಾಲಿನ ಲೆಕ್ಕಪರಿಶೋಧನೆಯ ವರದಿಗೆ ಸಂಬಂಧಿಸಿದ ಅನುಪಾಲನಾ ವರದಿಗಳನ್ನು ಉಭಯ ಸದನಗಳಿಗೆ ಸಲ್ಲಿಸಲು ಅನುಮೋದಿಸುವ ಕುರಿತು.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2021-22 ನೇ ಸಾಲಿನ ಲೆಕ್ಕಪರಿಶೋಧನೆಯ ವರದಿಗೆ ಸಂಬಂಧಿಸಿದ ಅನುಪಾಲನಾ ವರದಿಯನ್ನು ಸಿದ್ದಪಡಿಸಿ ಮುದ್ರಿಸಿದ್ದು, ಸದರಿ ಅನುಪಾಲನಾ ವರದಿಯನ್ನು ಸರ್ಕಾರದ ಉಭಯ ಸದನಗಳಿಗೆ(ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸಭೆ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 47(4) ರನ್ವಯ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.
19	2024/06/19	ಗೌರವ ಡಾಕ್ಟರೇಟ್‌ಗೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯನ್ನು ರಚಿಸುವ ಕುರಿತು.
ತೀರ್ಮಾನ		ಜುಲೈ/ಆಗಸ್ಟ್-2024 ರ ಮಾಹೆಯಲ್ಲಿ ಜರುಗಲಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 12ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬಂದ ಅರ್ಜಿಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿ ಘಟಿಕೋತ್ಸವ ಸಂಬಂಧಿ ಕ್ರಮ ಜರುಗಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಭೆಯು ಅನುಮೋದನೆ ನೀಡಿತು.
20	2024/06/20	12 ನೇ ಘಟಿಕೋತ್ಸವದ ಪೂರ್ವ ತಯಾರಿಗಾಗಿ ವಿವಿಧ ಕಾರ್ಯಗಳನ್ನು ನಿಯಮಾವಳಿ ಅನುಸರಿಸಿ ಕ್ರಮಕೈಗೊಳ್ಳಲು ಸಭೆಯ ಅನುಮೋದನೆಗೆ ಮಂಡಿಸಿದ ಕುರಿತು.
ತೀರ್ಮಾನ		ಜುಲೈ/ಅಗಸ್ಟ್-2024 ರ ಮಾಹೆಯಲ್ಲಿ ವಿಶ್ವವಿದ್ಯಾಲಯದ 12 ನೇ ವಾರ್ಷಿಕ ಘಟಿಕೋತ್ಸವವನ್ನು ನಡೆಸಲು ಯೋಜಿಸಲಾಗಿದ್ದು, ಸದರಿ ಸಮಾರಂಭಕ್ಕೆ ಈ ಕೆಳಕಾಣಿಸಿದ ಕಾರ್ಯಗಳನ್ನು ಆಯಾ ಕಾರ್ಯಕ್ಕೆ ಅನುಗುಣವಾಗಿ ಟೆಂಡರ್ ಅಥವಾ ದರ ಪಟ್ಟಿಗಳ ಮೂಲಕ ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮಕೈಗೊಳ್ಳಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.

		1. ಆಯೋಜನೆ ಸ್ಥಳವನ್ನು ನಿಗದಿಪಡಿಸುವುದು. 2. ಗೌರವ ಡಾಕ್ಟರೇಟ್‌ಗೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯನ್ನು ರಚಿಸುವ ಕುರಿತು. 3. ಘಟಿಕೋತ್ಸವದ ಮುಖ್ಯ ಅತಿಥಿಗಳ ಹೆಸರುಗಳನ್ನು ನಾಮನಿರ್ದೇಶನ ಮಾಡುವುದು. 4. ಗೌನ/ಖಾದಿ ಉಡುಪು ಕುರಿತು. 5. ಸುವರ್ಣ ಪದಕಗಳ ತಯಾರಿ ಕುರಿತು. 6. ಅರ್ಹತಾ ಪುಸ್ತಕ, ಪ್ರಮಾಣ ಪತ್ರಗಳು, ಆಮಂತ್ರಣ ಪತ್ರಿಕೆ ಮತ್ತು ಇತರೆ ಮುದ್ರಣಗಳು. 7. ಊಟ–ಉಪಹಾರದ ಕುರಿತು. 8. ಶಾಮಿಯಾನ ವ್ಯವಸ್ಥೆ ಮತ್ತು ದೀಪಾಲಂಕಾರ ವ್ಯವಸ್ಥೆ. 9. ಫೋಟೊಗ್ರಾಫಿ ಮತ್ತು ವಿಡಿಯೋಗ್ರಾಫಿಯ ಕುರಿತು. ಇತರೆ ಕಾರ್ಯಗಳ ಕುರಿತು.
21	2024/06/21	ಪದವಿ ಪ್ರಮಾಣ ಪತ್ರಗಳಲ್ಲಿನ ವಿಷಯ/ಅಡಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಕ್ರಮಕೈಗೊಳ್ಳಲು ಸಭೆಯ ಅನುಮೋದನೆಗೆ ಮಂಡಿಸಿದ ಕುರಿತು.
		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪದವಿ ಪ್ರಮಾಣ ಪತ್ರಗಳಲ್ಲಿನ ವಿಷಯ/ಅಡಕಗಳ ನವೀಕರಣಕ್ಕೆ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: **21.05.2024** ರಂದು ಸಭೆ ಸೇರಿ ಪ್ರಮಾಣ ಪತ್ರಗಳಲ್ಲಿನ ವಿಷಯ/ಅಡಕಗಳನ್ನು ನವೀಕರಣಗೊಳಿಸಿ ಒಂದು ಮಾದರಿ ಪ್ರಮಾಣ ಪತ್ರವನ್ನು ಮತ್ತು ಸಭೆಯ ನಡಾವಳಿಯನ್ನು ಸಲ್ಲಿಸಿರುತ್ತದೆ. ಸದರಿ ತಜ್ಞರ ಸಮಿತಿಯು ಸಲ್ಲಿಸಿದ ನಡಾವಳಿ ಮತ್ತು ಪ್ರಮಾಣ ಪತ್ರದ ಮಾದರಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು		
I	2024/06/ I	2024–25 ನೇ ಶೈಕ್ಷಣಿಕ ಸಾಲಿನಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿರುವ ಕನ್ನಡ ಹಾಗೂ ಇತಿಹಾಸ ವಿಭಾಗವನ್ನು ಮುಂದುವರಿಸುವ/ವರ್ಗಾವಣೆ ಮಾಡುವ ಕುರಿತು.
ತೀರ್ಮಾನ		ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ವಿಜಯಪುರ ಇವರು ಪ್ರತಿ ವರ್ಷ ಸ್ನಾತಕೋತ್ತರ ಕೇಂದ್ರ, ವಿಜಯಪುರ ಇಲ್ಲಿ ಕನ್ನಡ ಹಾಗೂ ಇತಿಹಾಸ ವಿಭಾಗದ ಪ್ರವೇಶಾತಿಯು ಕಡಿಮೆಯಾಗುತ್ತಿರುವ ಕಾರಣ ಸದರಿ ವಿಭಾಗವನ್ನು ಮುಂದುವರಿಸುವ ಬಗ್ಗೆ ಸೂಕ್ತ ನಿರ್ದೇಶನ ಕೋರಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಚರ್ಚಿಸಿದ ಸಭೆಯು, ಇತಿಹಾಸ ವಿಭಾಗವನ್ನು ಪ್ರಸಕ್ತ ವರ್ಷದಿಂದ ಮುಖ್ಯ ಆವರಣಕ್ಕೆ ವರ್ಗಾಯಿಸಲು ಮತ್ತು ಕನ್ನಡ ವಿಭಾಗವನ್ನು ಪ್ರವೇಶಾತಿ ಆಧಾರದ ಮೇಲೆ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.
II	2024/06/ II	ಕಾಕಡೆ, ಕರಿಯರ್ ಅಕಾಡೆಮಿ ಇವರು ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಗೊಳಿಸುವ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡುವ ಬಗ್ಗೆ.
ತೀರ್ಮಾನ		ಕಾಕಡೆ, ಕರಿಯರ್ ಅಕಾಡೆಮಿ ಇವರು **RRB/KAR/TET/KAS/BMTC** ಹೀಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಗೊಳಿಸಲು ಪರೀಕ್ಷಾ ಪೂರ್ವ ತರಬೇತಿಯನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ **App-Based** ಆಗಿ ಆನ್–ಲೈನ್ ಮೂಲಕ ಪ್ರಸಕ್ತ ಸಾಲಿನಲ್ಲಿ ಓದುತ್ತಿರುವ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ, ಈಗಾಗಲೇ ಉತ್ತೀರ್ಣಗೊಂಡು ವಿಶ್ವವಿದ್ಯಾಲಯದಿಂದ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ನೀಡಲು ಸಭೆಯು ಅನುಮೋದನೆ ನೀಡಿತು.
III	2024/06/ III	NEP INTERNSHIP/PROJECT ವಿಷಯಕ್ಕೆ ಬೋಧನಾ ಅವಧಿಯನ್ನು ನಿಗದಿಪಡಿಸುವ ಕುರಿತು.
ತೀರ್ಮಾನ		ಸ್ನಾತಕ ಕೋರ್ಸನ 6ನೇ ಸೆಮಿಸ್ಟರನ NEP INTERNSHIP/PROJECT ಗೆ ಸಂಬಂಧಿಸಿದಂತೆ ಬೋಧನಾ ಅವಧಿಯು 2 ಕ್ರೆಡಿಟ್ಸ್ ಹಾಗೂ 50 ಅಂಕಗಳು ಇರುವ ಪ್ರತಿ ವಿಷಯಗಳಿಗೆ ವಾರಕ್ಕೆ 2 ಗಂಟೆಯಂತೆ ಹಾಗೂ 3 ಕ್ರೆಡಿಟ್ಸ್ ಹಾಗೂ 100 ಅಂಕಗಳು ಇರುವ ಪ್ರತಿ ವಿಷಯಗಳಿಗೆ ವಾರಕ್ಕೆ 4 ಗಂಟೆಯನ್ನು ನಿಗದಿಪಡಿಸಲು ಸಭೆಯು ಅನುಮೋದನೆ ನೀಡಿತು.
IV	2024/03/ IV	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ Education App ಅಳವಡಿಸುವ ಬಗ್ಗೆ.
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಗಾಗಿ **Education App** ಅನ್ನು ಅಳವಡಿಸುವ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.

V	2024/03/ V	ಕೆಲವು ವಿಭಾಗಗಳ ಪಿಹೆಚ್.ಡಿ. ಮಾರ್ಗದರ್ಶಕರುಗಳು ಪಿಹೆಚ್.ಡಿ. ನಿಯಮಾವಳಿ 21.3 ಸರಿಯಾಗಿ ಪಾಲಿಸದೇ ಹಾಗೂ Vacancy Position ನ್ನು ಇರುವ ಕುರಿತು
ತೀರ್ಮಾನ		ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮಾರ್ಗದರ್ಶಕರು ಸರಿಯಾಗಿ ಪಿಹೆಚ್.ಡಿ. ನಿಯಮಾವಳಿಗಳನ್ನು ಪಾಲಿಸುತ್ತಿಲ್ಲ. ಇದರಿಂದ ಸಂಶೋಧನಾರ್ಥಿಗಳಿಗೆ ತೊಂದರೆಯಾಗಿದೆ. ಶಾಸ್ತ್ರೀಯ ಕನ್ನಡ ಅಧ್ಯಯನ ವಿಭಾಗ ಮತ್ತು ರಾಜ್ಯಶಾಸ್ತ್ರ ವಿಭಾಗಗಳನ್ನು ಒಳಗೊಂಡು ವಿವಿಧ ವಿಭಾಗಗಳಲ್ಲಿ ಮಾರ್ಗದರ್ಶಕರು ಹಾಗೂ ಸಂಶೋಧನಾರ್ಥಿಗಳಲ್ಲಿ ಹಲವಾರು ಭಿನ್ನಾಭಿಪ್ರಾಯಗಳು ಕೂಡ ಉದ್ಭವಿಸುತ್ತಿರುವುದರಿಂದ ಅವುಗಳನ್ನು ಪರಿಹರಿಸುವುದು ಅವಶ್ಯವಿರುತ್ತದೆ ಎಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಕಾರಣ, ಸಭೆಯು ಒಂದು ಸಮಿತಿಯನ್ನು ರಚಿಸುವಂತೆ ಸೂಚಿಸಿತು ಹಾಗೂ ಸಮಿತಿ ವರದಿಯನ್ವಯ ಕ್ರಮ ಕೈಗೊಳ್ಳಲು ತೀರ್ಮಾನಿಸಿತು. ಮುಂದುವರೆದು, ಶಾಸ್ತ್ರೀಯ ಕನ್ನಡ ಅಧ್ಯಯನ ವಿಭಾಗ ಮತ್ತು ರಾಜ್ಯಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳಿಂದ ಪಿಎಚ್.ಡಿ. ಮಾರ್ಗದರ್ಶಕರ ಕುರಿತಂತೆ ಹಲವಾರು ದೂರುಗಳು ಬರುತ್ತಿದ್ದರಿಂದ ಇಬ್ಬರು ಸಂಶೋಧನಾ ವಿದ್ಯಾರ್ಥಿಗಳಾದ ಶ್ರೀ. ಶ್ಯಾಮ ಕಲ್ಲೊಳ್ಳಕರ, ಕನ್ನಡ ವಿಭಾಗ ಮತ್ತು ಶ್ರೀ ಬಿ. ಸಿ. ಪಾಟೀಲ್, ರಾಜ್ಯಶಾಸ್ತ್ರ ವಿಭಾಗ ಇವರುಗಳನ್ನು ಸಭೆಗೆ ಆಹ್ವಾನಿಸಿ ಅವರ ಸಮಸ್ಯೆಯನ್ನು ಸಭೆಯು ಆಲಿಸಿದ ನಂತರ, ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಹನುಮಂತ ಸಂಜೀವನ್ನವರ ಮತ್ತು ಡಾ. ಹನುಮಂತಪ್ಪ.ಡಿ.ಜಿ. ಇವರುಗಳ ಮಾರ್ಗದರ್ಶನದ ನ್ಯೂನತೆಗಳನ್ನು ಸಭೆಯು ಚರ್ಚಿಸಿ ಐದು ವರ್ಷ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯಿಂದ ಹೊರಗಿಡಲು ಹಾಗೂ ಎಚ್ಚರಿಕೆ ಪತ್ರವನ್ನು ನೀಡಲು ಸಭೆಯು ತೀರ್ಮಾನಿಸಿತು. ಪ್ರೊ. ಮಾರುತಿರಾವ್, ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುತ್ತಿರುವ ಸಂಶೋಧನಾರ್ಥಿಗಳ ಯಾವುದೇ ಪಿಎಚ್.ಡಿ ಪದವಿ ಇಲ್ಲಿಯವರೆಗೆ ಪೂರ್ಣಗೊಂಡಿರುವುದಿಲ್ಲ ಮತ್ತು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿರುವ 12 ಜನ ಸಂಶೋಧನಾರ್ಥಿಗಳ ಪಿಎಚ್.ಡಿ. ನೊಂದಣಿ ರದ್ದಾಗಿರುತ್ತದೆ ಎಂಬ ಮಾಹಿತಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಸಭೆಯು ಸುದೀರ್ಘವಾಗಿ ಚರ್ಚಿಸಿದ ನಂತರ ಇವರಿಗೂ 2024–25 ಶೈಕ್ಷಣಿಕ ವರ್ಷದಿಂದ 5 ವರ್ಷಗಳವರೆಗೆ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯಿಂದ ಹೊರಗಿಡಲು ಹಾಗೂ ಎಚ್ಚರಿಕೆ ಪತ್ರವನ್ನು ನೀಡಲು ಸಭೆಯು ತೀರ್ಮಾನಿಸಿತು. ಪ್ರೊ. ಮಾರುತಿರಾವ್, ಡಾ. ಹನುಮಂತ ಸಂಜೀವನ್ನವರ ಹಾಗೂ ಡಾ. ಹನುಮಂತಪ್ಪ.ಡಿ.ಜಿ. ಇವರುಗಳ ಮಾರ್ಗದರ್ಶನದಲ್ಲಿ ಪ್ರಸ್ತುತ ಇರುವ ಸಂಶೋಧನಾರ್ಥಿಗಳನ್ನು ವಿಭಾಗದ ಬೇರೆ ಸಂಶೋಧನಾ ಮಾರ್ಗದರ್ಶಕರಿಗೆ ವರ್ಗಾಯಿಸುವ ಕುರಿತಂತೆ ಡಾಕ್ಟರಲ್ ಸಮಿತಿ ಸಭೆಯು ಸೂಕ್ತ ನಿರ್ಣಯ ತೆಗೆದುಕೊಂಡು ವರ್ಗಾಯಿಸಲು ಸಭೆಯು ಸೂಚಿಸಿತು.
VI	2024/03/ VI	2021–22 ರ ಮುಂಚೆ ಸಂಯೋಜನೆಗೊಂಡಿರುವ ಮತ್ತು ಕಾರ್ಯನಿರ್ವಹಿಸದೇ ಇರುವ ಮಹಾವಿದ್ಯಾಲಯಗಳ ಸ್ಥಗಿತಕ್ಕಾಗಿ UUCMS ನಲ್ಲಿ ಅವಕಾಶವಿರುವುದಿರುವ ಕಾರಣ Offline ನ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಭೆಯ ತೀರ್ಮಾನಕ್ಕಾಗಿ ಮುಂದಿಡುವ ಕುರಿತು.
ತೀರ್ಮಾನ		**2021–22** ರ ಮುಂಚೆ ಸಂಯೋಜನೆಗೊಂಡಿರುವ ಮತ್ತು ಕಾರ್ಯನಿರ್ವಹಿಸದೇ ಇರುವ ಮಹಾವಿದ್ಯಾಲಯಗಳ ಸ್ಥಗಿತಕ್ಕಾಗಿ UUCMS ನಲ್ಲಿ ಅವಕಾಶವಿಲ್ಲದಿರುವ ಕಾರಣ Offline ನ ಮುಖಾಂತರ ಅರ್ಜಿ ಸಲ್ಲಿಸಲು ಈ ಕೆಳಕಾಣಿಸಿದ ಆರು ಮಹಾವಿದ್ಯಾಲಯಗಳು ಅರ್ಜಿ ಸಲ್ಲಿಸಿರುತ್ತವೆ. ಈ ತರನಾಗಿ ಸ್ಥಗಿತಗೊಂಡ ಮಹಾವಿದ್ಯಾಲಯಗಳನ್ನು ಮುಚ್ಚಲು ಸರ್ಕಾರಕ್ಕೆ Offline ನಲ್ಲಿ ಶಿಫಾರಸ್ಸು ಮಾಡಲು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರ ಮನವಿಯ ಹಿನ್ನೆಲೆಯಲ್ಲಿ, ಸಭೆಯು ಚರ್ಚಿಸಿ ಒಪ್ಪಿಗೆ ಸೂಚಿಸಿತು.

ಸಂಖ್ಯೆ	ಮಹಾವಿದ್ಯಾಲಯಗಳ ಹೆಸರು	ಷರಾ
1	ಶ್ರೀ ಶಿವಾನಂದ ಮಹಾವಿದ್ಯಾಲಯ, ಕಾಗವಾಡ	ಬಿಬಿಎ
2	ಎಸ್.ಬಿ.ಜಿ. ಕಲಾ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.	ಸಂಪೂರ್ಣ ಮಹಾವಿದ್ಯಾಲಯ
3	ನೇತಾಜಿ ಇಂಟಿಗ್ರೇಟೆಡ್ ರೂರಪ್ ಡೆವಲಪಮೆಂಟ್ ಸೊಸೈಟಿಯ ಪವಿತ್ರ ಪದವಿ ಮಹಾವಿದ್ಯಾಲಯ, ಮುಧೋಳ	ಎಂ.ಎಸ್. ಡಬ್ಲ್ಯೂ
4	ಶ್ರೀ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕಲ್ಲಾರ	ಸಂಪೂರ್ಣ ಮಹಾವಿದ್ಯಾಲಯ
5	ಶ್ರೀ ಬೀರಶ್ವರ ಶಿಕ್ಷಣ ಸಂಸ್ಥೆ ಸಂಕೇಶ್ವರದ ಶ್ರೀ ನಾಗಪ್ಪಣ್ಣ ಕರಜಗಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸಂಕೇಶ್ವರ	ಸಂಪೂರ್ಣ ಮಹಾವಿದ್ಯಾಲಯ

	6	ಶ್ರೀ ಮಲ್ಲಿಕಾರ್ಜುನ ವಿದ್ಯಾಪೀಠದ ಶ್ರೀ ಜಗಜ್ಯೋತಿ ಬಸವೇಶ್ವರ ಪದವಿ ಮಹಾವಿದ್ಯಾಲಯ, ಬೆಳಗಾವಿ.	ಸಂಪೂರ್ಣ ಮಹಾವಿದ್ಯಾಲಯ
VII	2024/03/ VII	2024–25ನೇ ಸಾಲಿನಿಂದ ಸರ್ಕಾರಿ ಮಹಾವಿದ್ಯಾಲಯಗಳಿಂದ ಸಂಯೋಜನೆಗೆ ಸಂಬಂಧಿಸಿ ಯಾವುದೇ ಶುಲ್ಕವನ್ನು ಆಕರಿಸದೇ ಇರುವ ಕುರಿತು ಸಭೆಯ ತೀರ್ಮಾನಕ್ಕಾಗಿ ಮುಂದಿಡುವ ಕುರಿತು.	
ತೀರ್ಮಾನ		ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಒಟ್ಟು 35 ಸರ್ಕಾರಿ ಮಹಾವಿದ್ಯಾಲಯಗಳು ಸಂಯೋಜನೆಗೊಂಡಿದ್ದು, 2001ರ ಸರ್ಕಾರದ ಆದೇಶದನ್ವಯ ಸದರಿ ಮಹಾವಿದ್ಯಾಲಯಗಳಿಂದ ಯಾವುದೇ ಶುಲ್ಕಗಳನ್ನು ಆಕರಿಸಬಾರದೆಂದು ಮಹಾವಿದ್ಯಾಲಯಗಳ ಪ್ರಾಚಾರ್ಯರು ಕೋರಿರುವ ಮನವಿಯನ್ನು ಸಭೆಗೆ ಮಂಡಿಸಲಾಯಿತು. ಚರ್ಚಿಸಿದ ಸಭೆಯು, ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ 35 ಸರ್ಕಾರಿ ಮಹಾವಿದ್ಯಾಲಯಗಳಿಗೆ ಸಂಯೋಜನೆ ಶುಲ್ಕದಿಂದ ವಿನಾಯಿತಿ ನೀಡಲು ಅನುಮೋದನೆ ನೀಡಿತು.	

ಕೊನೆಯದಾಗಿ, ಕುಲಸಚಿವರು(ಮೌ) ಧನ್ಯವಾದಗಳನ್ನು ತಿಳಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ: ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.